ನಡೆಯುತ್ತದೆ. ಬಿಎಫ್‌ಜಿ ಉಪಾಹಾರ ಸೇವಿಸುವುದು 'ಮಾಯಾಬಜಾರ್'ನ ಘಟೋತ್ಕಚನನ್ನು ನೆನಪಿಸುತ್ತದೆ. ಆದರೆ, ಘಟೋತ್ಕಚನಂತೆ ಬಿಎಫ್‌ಜಿ ಮಾಯಾವಿಯಲ್ಲ. ಅತಿ ಜಾಣನೂ ಅಲ್ಲ. ಅಪಾರ ಶಕ್ತಿವಂತನೂ ಅಲ್ಲ. ಮಗುವೊಂದು ತನ್ನ ವಯಸ್ಸಿಗೆ ಮೀರಿ ಬೆಳೆದಂತೆ ಈ ಮುದುಕ ಕಾಣಿಸುತ್ತಾನೆ. ಅರಮನೆಯಲ್ಲಿ ಕಸಿವಿಸಿಗೊಳ್ಳುತ್ತಾನೆ, ದಿಗಿಲುಬೀಳುತ್ತಾನೆ, ಮತ್ತೊಮ್ಮೆ ಮಗುವಂತೆ ಆನಂದಿಸುತ್ತಾನೆ.

ಮುಂದಿನದು ಮಕ್ಕಳನ್ನು ತಿನ್ನುವ ರಕ್ಕಸರನ್ನು ಮಟ್ಟ ಹಾಕುವ ಸನ್ನಿವೇಶ. ದೈತ್ಯರ ಕೊಳ್ಳವನ್ನು ಸೈನಿಕರಿಗೆ ಬಿಎಫ್‌ಜಿ ತೋರಿಸುತ್ತಾನೆ. ಹನುಮಂತನಂತೆ ಹಾರುಹೆಜ್ಜೆಗಳಲ್ಲಿ ಕಲ್ಲುಕೊರಕಲುಗಳನ್ನು ಲೀಲಾಜಾಲವಾಗಿ ದಾಟುವ ಗೂನು ಹಿರೀಕನನ್ನು ವಾಯುಪಡೆ ಹಿಂಬಾಲಿಸುತ್ತದೆ. ಇದ್ದಕ್ಕಿದ್ದಂತೆ ತಮ್ಮ ಮೇಲೆ ಎರಗಿದ ಮನುಷ್ಯರನ್ನು ಕಂಡು ರಕ್ಕಸರಿಗೆ ಗಾಬರಿ. ಏನು ಮಾಡಬೇಕೆಂದು ಅವರು ಯೋಚಿಸುವಷ್ಟರಲ್ಲಿ ಬಲೆಗಳಲ್ಲಿ ಅವರನ್ನು ಬಂಧಿಸಲಾಗುತ್ತದೆ. ಕೊನೆಗೆ, ಆ ದೈತ್ಯದೇಹಿಗಳನ್ನು ಮನುಷ್ಯರಿಂದ ದೂರದಲ್ಲಿರುವ ನಿರ್ಜನ ದ್ವೀಪ ಪ್ರದೇಶವೊಂದಕ್ಕೆ ದೂಡಲಾಗುತ್ತದೆ. ಬಿಎಫ್‌ಜಿ ತಿನ್ನುತ್ತಿದ್ದ ಯಾವ ತರಕಾರಿಯನ್ನು ರಕ್ಕಸರು ತಮಾಷೆ ಮಾಡುತ್ತಿದ್ದರೋ, ಅದೇ ಕಾಯಿಪಲ್ಲೆ ಅವರೊಂದಿಗೆ ಉಳಿಯುತ್ತದೆ.

ರಕ್ಕಸರ ಕಾಟದಿಂದ ಮಕ್ಕಳಿಗೆ ಮುಕ್ತಿ ದೊರೆಯಿತು. ಇದರ ಜೊತೆಗೆ ಸೋಫಿಗೆ ಕೂಡ ರಾಣಿಯ ಆಶ್ರಯ ದೊರೆಯುತ್ತದೆ. ಬಿಎಫ್‌ಜಿ ಮತ್ತೆ ಒಂಟಿಯಾಗುತ್ತಾನೆ. ಆದರೆ, ಅವನ ಜೊತೆ ಸೋಫಿಯೊಂದಿಗೆ ಕಳೆದ ಮಧುರ ಕ್ಷಣಗಳಿವೆ. ಈಗವನು ಯಾರ ಭಯವೂ ಇಲ್ಲದೆ ತನ್ನ ನೆಚ್ಚಿನ ಕೃಷಿಯಲ್ಲಿ ತೊಡಗಬಲ್ಲ; ತರಕಾರಿಗಳನ್ನು ಬೆಳೆದು ಆನಂದಿಸಬಲ್ಲ. ಏಕಾಂತವನ್ನು ರಂಗೇರಿಸಬಲ್ಲ ಕನಸುಗಳ ಕೊಳ್ಳವಂತೂ ಇದ್ದೇಇದೆ.

ನಗರದ ಕೋಣೆಯಲ್ಲಿ ಕುಳಿತು ಸೋಫಿ ಅಜ್ಜನನ್ನು ಕನವರಿಸಿಕೊಳ್ಳುತ್ತಾಳೆ. ತನ್ನ ಮಾತನ್ನು ಬಿಎಫ್‌ಜಿ ಕೇಳಿಸಿಕೊಳ್ಳುತ್ತಿದ್ದಾನೆ ಎನ್ನುವ ವಿಶ್ವಾಸ ಅವಳದು. ಅತ್ತ ಬಿಎಫ್‌ಜಿ ಕೂಡ ಸೋಫಿಯ ಗುಂಗಿನಿಂದ ಮುಕ್ತನಾಗಿಲ್ಲ. ಏನನ್ನೋ ಬರೆಯುತ್ತ ಕೂತ ಅವನ ಮೈಮನಗಳು ಸೋಫಿಯ ನೆನಪಿನಲ್ಲಿ ಪುಲಕಗೊಳ್ಳುತ್ತವೆ.

ಇದು ಸೋಫಿ ಎನ್ನುವ ಹುಡುಗಿಯ ಕಥೆ. ಬಿಎಫ್‌ಜಿ ಎನ್ನುವ ರಕ್ಕಸದೇಹದ ಅಪ್ಪಟ ಮನುಷ್ಯನ ಕಥೆ. ಈ ಬಿಎಫ್‌ಜಿ ಈ ಕಾಲಕ್ಕೆ ನಮಗೆಲ್ಲ ಅಗತ್ಯವಾದ ಎರಡು ವಿಶಿಷ್ಟ ಸಂಗತಿಗಳನ್ನು ನೆನಪಿಸುವ ಹಿರೀಕನಂತೆ ಕಾಣಿಸುತ್ತಾನೆ. ಆ ಸಂಗತಿಗಳೆಂದರೆ – ಕೃಷಿ ಹಾಗೂ ಮನುಷ್ಯಪ್ರೀತಿ. ಬಿಎಫ್‌ಜಿ ಪಾಲಿಗೆ ಮನುಷ್ಯಪ್ರೇಮವೂ ಪರಿಸರಪ್ರೇಮವೂ ಒಂದೇ ನಾಣ್ಯದ ಎರಡು ಮುಖಗಳು. ಮಣ್ಣಿನಲ್ಲಿ ಬೀಜಗಳನ್ನು ಬಿತ್ತಬಲ್ಲ ಆತ, ಮನುಷ್ಯರ ಎದೆಗಳಲ್ಲಿ ಕನಸುಗಳನ್ನೂ ಬೀರಬಲ್ಲ. ಈ ನಿಟ್ಟಿನಲ್ಲಿ ಅವನೊಬ್ಬ ಹದಿನಾರಾಣೆ ಮಣ್ಣಿನಮಗ, ಕೃಷಿಕ. ಮಣ್ಣಿನ ನಂಟಿನಿಂದ ಹಾಗೂ ಸುಂದರ ಸ್ವಪ್ನಗಳ ಗುಂಗಿನಿಂದ ಆಧುನಿಕ ಜಗತ್ತು ದೂರವಾಗುತ್ತಿರುವ ದಿನಗಳಿವು. ಹಸಿರು ಚಿಗುರಿಸುವ ಹೊಲಗಳು ಹಾಗೂ ಹಸಿರನ್ನು ಪೊರೆಯುವ ನದಿ–ತೊರೆಗಳೆಲ್ಲ ಮಹಲುಗಳಾಗಿ ನಗರಗಳಾಗಿ ರೂಪಾಂತರಗೊಂಡಿರುವ ದಿನಗಳಿವು. ಆಧುನಿಕ ಸಂದರ್ಭದ ಅಭಿವೃದ್ಧಿಮೀಮಾಂಸೆಯಲ್ಲಿ ಕೃಷಿ ಒಂದು ದುಃಸ್ವಪ್ನದಂತೆ ಕಾಣಿಸುತ್ತಿದೆ. ತಮಗೆ ಬೇಕಾದುದೆಲ್ಲವೂ ಪೇಟೆಯಲ್ಲಿ ಲಭ್ಯ ಎಂದು ನೆಚ್ಚಿಕೊಂಡವರು ಸುಂದರ ಸ್ವಪ್ನಗಳಿಂದ ದೂರವಾಗಿದ್ದಾರೆ. ಇಂಥ ಸಂದರ್ಭದಲ್ಲಿ ಕನಸುಗಳ ಸಂಯೋಜಕ ಬಿಎಫ್‌ಜಿ ನಮಗೆ ಮಾದರಿಯಂತೆ ಕಾಣಿಸುತ್ತಾನೆ.

ಸೋಫಿಯ ಪಾತ್ರದಲ್ಲಿ ರೂಬಿ ಬರ್ನ್‌ಹಿಲ್ ನಟಿಸಿದ್ದರೆ, ಬಿಎಫ್‌ಜಿ ಪಾತ್ರದಲ್ಲಿ ಮಾರ್ಕ್